ದಿಃ 29.02.2020. ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಬಿ ಆರ್ ಪಿ ವಕೀಲರಿಂದ

7. ವಿಲ್ ನಾಮೆ ತಯ್ಯಾರು ಮಾಡುವವರು ಸಿದ್ದಮ್ಮನ ಪಕ್ಕದಲ್ಲಿಯೇ ಇದ್ದರು. ಆ ಸಮಯದಲ್ಲಿ ಸಿದ್ದಮ್ಮ ಕುರ್ಚಿ ಮೇಲೆ ಕುಳಿತುಕೊಂಡಿದ್ದರು. ಆಸ್ತಿಯ ವಿವರಗಳನ್ನು ಸಿದ್ದಮ್ಮನೇ ಹೇಳಿ ಬರೆಸಿರುತ್ತಾರೆ. ವಿಲ್ ನಾಮೆಯಲ್ಲಿ ಹನುಮಂತಪುರ ಮತ್ತು ಚೆನ್ನಗಿರಿಯಲ್ಲಿಯ ಆಸ್ತಿಗಳ ಬಗ್ಗೆ ಬರೆಯಲಾಗಿದೆ. ಹನುಮಂತಪುರದ ಆಸ್ತಿಯ ವಿವರ ಹೇಳಲಾಗುವುದಿಲ್ಲ. ಅದೇರೀತಿ ಚೆನ್ನಗಿರಿಯಲ್ಲಿಯ ಅಸ್ತಿಯಲ್ಲಿ ವಿವರ ಕೂಡಾ ಹೇಳಲಾಗುವುದಿಲ್ಲ.ವಿಲ್ ನಾಮೆಗೆ ಸಿದ್ದಮ್ಮ ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ. ನೊಂದಾಣಾಧಿಕಾರಿಗಳು ಆಕೆಯ ಸಹಿಯನ್ನು ಗುರುತಿಸಿರುತ್ತಾರೆ. ವಿಲ್ ನಾಮೆ ತಯ್ಯಾರಿಸಲು 1 ½ ತಾಸು ಹಿಡಿದಿರುತ್ತದೆ. ವಿಲ್ ನಾಮೆ ತಯ್ಯಾರಿಸುವ ಮೊದಲು ಕರಡು ಪ್ರತಿ ತಯ್ಯಾರಿಸಿಲ್ಲ. ಸಿದ್ದಮ್ಮ ಹೇಳುತ್ತಿದ್ದಂತೆಯೇ ನೇರವಾಗಿ ಅದನ್ನು ತಯ್ಯಾರಿಸಲಾಗಿದೆ. ವಿಲ್ ನಾಮೆ ಬರೆದು ಮುಗಿಸಿದಾಗ ಆ ದಿನ ರಾತ್ರಿ 7.30 ಆಗಿತ್ತು. ವಿಲ್ ನಾಮೆ ತಯ್ಯಾರಿಸುವವರೆಗೆ ನೊಂದಾಣಾಧಿಕಾರಿಗಳು ಅಲ್ಲಿಯೇ ಇದ್ದರು. ವಿಲ್ ನಾಮೆ ತಯ್ಯಾರಿಸಿದ ನಂತರ ಅಧಿಕಾರಿಗಳು ಸಿದ್ದಮ್ಮನ ಹೆಬ್ಬೆಟ್ಟಿನ ಗುರುತು ಹಾಕಿಸಿದರು . ನಂತರ ನಾನು ಸಹಿ ಹಾಕಿರುತ್ತೇನೆ.

8. ಆ ಸಮಯದಲ್ಲಿ ಸಿದ್ದಮ್ಮ ಮಾನಸಿಕವಾಗಿ ಮತ್ತು ದೈಹಿಕವಾಗಿ ಸುಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಎದುರುದಾರ ನಂಃ 7 ಸುಕನ್ಯಾ ಕುಮಾರಿಯವರು ವಿಲ್ ನಾಮೆ ತಯ್ಯಾರಿಸಿರುತ್ತಾರೆಂದರೆ ಸರಿಯಲ್ಲ. ವಿಲ್ ಪ್ರಕಾರ 7ನೇ ಎದುರುದಾರರಿಗೆ ಹೆಚ್ಚಿನ ಆಸ್ತಿ ಕೊಡಲಾಗಿದೆ ಎಂದರೆ ಸರಿಯಲ್ಲ. ವಿಲ್ ನಾಮೆ ಬಗ್ಗೆ ಮತ್ತು ಅದರಲ್ಲಿಯ ಸಂಗತಿಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಕೂಡಾ 7ನೇ ಎದುರುದಾರರು ಮತ್ತು ಆಕೆಯ ಗಂಡನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ 1ನೇ ಎದುರುದಾರರ ಪರ ಶ್ರೀ ಎಸ್ ಕೆ ವಕೀಲರಿಂದ ,

9. ದಿಃ 01.08.2012 ರಂದು ವಿಲ್ ನಾಮೆ ಬರೆಯಲಾಗಿದೆ. ಆ ಸಮಯದಲ್ಲಿ ಸಿದ್ದಮ್ಮ ಚೆನ್ನಾಗಿ ಓಡಾಡುವ ಸ್ಥಿತಿಯಲ್ಲಿದ್ದರು. ಸಿದ್ದಮ್ಮ ಆ ಸಮಯದಲ್ಲಿ ಸ್ವತಂತ್ರವಾಗಿ ಓಡಾಡುವ ಮತ್ತು ವ್ಯವಹರಿಸುವ ಸ್ಥಿತಿಯಲ್ಲಿದ್ದರು. ಸಿದ್ದಮ್ಮನಿಗೆ ಓದು ಬರಹ ಬರುತ್ತಿರಲಿಲ್ಲ. ಸಿದ್ದಮ್ಮ ತನಗೆ ಓದು ಬರಹ ಬರುತ್ತಿಲ್ಲವಾದ್ದರಿಂದ 7 ನೇ ಎದುರುದಾರರ ಸಹಾಯ ಪಡೆಯುತ್ತಿದ್ದರು. ಓದು ಬರಹ ಬರದಿದ್ದಾಗ ನಂಬಿಕಸ್ಥರ ಮಾತು ಕೇಳಿ ಯಾವುದೇ ದಾಖಲೆಗೆ ಸಹಿ ಹಾಕಬೇಕಾಗುತ್ತದೆ ಎಂದರೆ ಸರಿ . 7 ನೇ ಎದುರುದಾರರು ಹೊರಗಡೆ ಯಾವುದೇ ಕೆಲಸಕ್ಕೆ ಹೋಗುವುದಿಲ್ಲ ಮತ್ತು ಅವರು ಗೃಹಿಣಿ ಎಂದರೆ ಸರಿ . ಯಾವುದೇ ವ್ಯವಹಾರ ಮಾಡಬೇಕಾದರೆ ಸಿದ್ದಮ್ಮ 7 ನೇ ಎದುರುದಾರರೊಂದಿಗೆ ವಿಚಾರಿಸುತ್ತಿದ್ದರೆಂದರೆ ಸರಿ . ಸಿದ್ದಮ್ಮನವರು 2 ತಿಂಗಳ ಮೊದಲಿನಿಂದ ವಿಲ್ ಮಾಡುವ ಬಗ್ಗೆ ಹೇಳುತ್ತಿದ್ದರು. ಈ ಕುರಿತು 7 ನೇ ಎದುರುದಾರರಿಗೆ ಕೂಡಾ ಮಾಹಿತಿ ಇತ್ತು ಎಂದರೆ ಗೊತ್ತಿಲ್ಲ.

10. ನಾನು ಸಿದ್ದಮ್ಮನವರ ಮನೆಗೆ ಹೋದಾಗ ಅಲ್ಲಿ ನೊಂದಣಾಧಿಕಾರಿಗಳು , ಟೈಪ್ ಮಾಡುವವರು , ಇನ್ನೊಬ್ಬ ಸಾಕ್ಷಿದಾರರಾದ ಭೀಮಪ್ಪ ಮತ್ತು ಉದಯಪ್ಪ ಇದ್ದರು. ಇವರನ್ನು ಹೊರತು ಪಡಿಸಿ ಬೇರೆಯವರು ಇದ್ದರು. ಅವರ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ದಿನ ಸಿದ್ದಮ್ಮ ಎಷ್ಟು ಪುಟಗಳಿಗೆ ಹೆಬ್ಬೆಟ್ಟಿನ ಗುರುತು ಹಾಕಿದ್ದಾರೆಂದು ನೆನಪಿಲ್ಲ. ನಾನು ಒಂದು ಕಡೆ ಮಾತ್ರ ಸಹಿ ಹಾಕಿರುತ್ತೇನೆ. ವಿಲ್ ನಾಮೆಗೆ ಸಾಕ್ಷಿದಾರರಾಗಿ ನಾನು , ಮಹದೇವಪ್ಪ ಸಹಿ ಹಾಕಿರುತ್ತೇವೆ. ಬೇರೆಯವರು ಯಾರು ಸಹಿ ಹಾಕಿದರೆಂದು ಗೊತ್ತಿಲ್ಲ. ವಿಲ್ ನಾಮೆಗೆ ನಾನು ಸಹಿ ಹಾಕುವಾಗ ಸಿದ್ದಮ್ಮನ ಹೆಬ್ಬೆಟ್ಟಿನ ಗುರುತುಗಳು ಮಾತ್ರ ದಾಖಲೆಗೆ ಇದ್ದವು. ಸಿದ್ದಮ್ಮನಿಗೆ ಹೆಬ್ಬೆಟ್ಟಿನ ಗುರುತುಗಳನ್ನು ಹಾಕಲು ನೊಂದಣಾಧಿಕಾರಿಗಳು ಹೇಳಿದರು. ವಿಲ್ ನಾಮೆ ಬರೆಯಲು ಬರಹದ ಹಾಳೆಯನ್ನು ಉಪ ನೊಂದಣಾಧಿಕಾರಿಗಳು ತಂದಿದ್ದರು. ಉಪ ನೊಂದಾಣಾಧಿಕಾರಿಗಳು ಸಿದ್ದಮ್ಮನ ಫೋಟೊ ತೆಗೆದಿದ್ದರ ಬಗ್ಗೆ ನೆನಪಿಲ್ಲ. ನಾನು ಸಹಿ ಹಾಕುವಾಗ ದಾಖಲೆಗೆ ಸಿದ್ದಮ್ಮನ ಫೋಟೊ ಲಗತ್ತಿಸಲಾಗಿತ್ತು. ಅದು 'ಕಪ್ಪು ಬಿಳುಪು' ಫೋಟೊ ಆಗಿತ್ತು.ನಾನು ಫೋಟೊವನ್ನು ಗುರುತಿಸಿ ಸಹಿ ಹಾಕಿಲ್ಲ. ದಿಃ

01.08.2012 ರಂದು ವಿಲ್ ನಾಮೆಗೆ ಸಹಿ ಹಾಕಿದ್ದು ಬಿಟ್ಟರೆ ನಾನು ಬೇರೆ ಸಹಿ ಮಾಡಿಲ್ಲ. ವಿಲ್ ನಾಮೆಗೆ ಮಾಹಿತಿ ಕೊಡಲು ಸಿದ್ದಮ್ಮ ತನ್ನ ಬಳಿ ಯಾವ ಯಾವ ದಾಖಲೆಗಳನ್ನು ಇಟ್ಟುಕೊಂಡಿದ್ದರು ಎಂದು ನನಗೆ ಮಾಹಿತಿ ಇಲ್ಲ. ನಾನು ಹೋದಾಗ ದಾಖಲೆಯಲ್ಲಿ ಒಂದೆರಡು ಲೈನ್ ಬರೆಯಲಾಗಿತ್ತು. ಸಿದ್ದಮ್ಮನವರು ಹೇಳುತ್ತಿದ್ದಂತೆಯೇ ದಾಖಲೆಯನ್ನು ಬರೆಯಲಾಗುತ್ತಿತ್ತು. ನ್ಯಾಯಾಲಯದ ಡಿಕ್ರಿ ಪ್ರಕಾರ ಆದ ಹಿಸ್ಸೆಗಳ ಬ ಗ್ಗೆ ವಿಲ್ ನಾಮೆಯಲ್ಲಿ ಬರೆದ ಬಗ್ಗೆ ಮಾಹಿತಿ ಇಲ್ಲ. ವಿಲ್ ನಾಮೆಯಲ್ಲಿ ಸಿದ್ದಮ್ಮನ ಆರೋಗ್ಯದ ಬಗ್ಗೆ ಬರೆಯಲಾಗಿದೆ. ಸಿದ್ದಮ್ಮನ ಆರೋಗ್ಯ ಚೆನ್ನಾಗಿತ್ತು ಎಂದು ಅದರಲ್ಲಿ ಬರೆಯಲಾಗಿದೆ ಎಂದು ಹೇಳುತ್ತಾರೆ.

11. ಸಿದ್ದಮ್ಮ ಇವರು ಕುರುಬ ಜಾತಿಗೆ ಸೇರಿರುತ್ತಾರೆ. ಕುರುಬ ಜಾತಿಯಲ್ಲಿ ಶವ ಸಂಸ್ಕಾರವನ್ನು ಗಂಡು ಮಕ್ಕಳು ಮಾಡುತ್ತಾರೆಂದರೆ ಸರಿ . ಸಿದ್ದಮ್ಮನ ಗಂಡು ಮಕ್ಕಳಲ್ಲಿ ಒಬ್ಬ ಮಗ ಮಾತ್ರ ಬದುಕಿದ್ದರು. ನಾನು ಸಿದ್ದಮ್ಮ ಕುಟುಂಬದ ವ್ಯವಹಾರಗಳಲ್ಲಿ ಭಾಗವಹಿಸಿಲ್ಲ. ಸಿದ್ದಮ್ಮನು ತನ್ನ ಮಕ್ಕಳೊಂದಿಗೆ ಹೊಂದಿದ್ದ ಸಂಬಂಧದ ಬಗ್ಗೆ ಮಾಹಿತಿ ಇದೆ. ಸಿದ್ದಮ್ಮನವರ ಹೆಣ್ಣು ಮಕ್ಕಳು ಮತ್ತು ಮೊಮ್ಮಕ್ಕಳು ನೋಡಲು ಬರುವುದಾದರೆ ದಾವಣಗೆರೆಗೆ ಬರಬೇಕಿತ್ತು. 7 ನೇ ಎದುರುದಾರರ ಮನೆಗೆ ಸಿದ್ದಮ್ಮನವರ ಹೆಣ್ಣು ಮಕ್ಕಳು ಮತ್ತು ಮೊಮ್ಮಕ್ಕಳು ಬರುತ್ತಿರಲಿಲ್ಲ. ವಿಲ್ ನಾಮೆಯಲ್ಲಿ ಸಿದ್ದಮ್ಮ ತನ್ನ ಹೆಣ್ಣು ಮಕ್ಕಳು ನೋಡಲು ಬರುತ್ತಿಲ್ಲವೆಂದು ಬರೆಸಿಲ್ಲ. ಸಿದ್ದಮ್ಮನವರು ತನ್ನ ಉಳಿದ ಹೆಣ್ಣು ಮಕ್ಕಳನ್ನು ಹೇಗೆ ನೋಡಿಕೊಳ್ಳುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸಿದ್ದಮ್ಮ ಎಷ್ಟು ಆಸ್ತಿಗಳ ಬಗ್ಗೆ ವಿಲ್ ಬರೆದಿದ್ದಾರೆಂದು ಗೊತ್ತಿಲ್ಲ. ಸಿದ್ದಮ್ಮನಿಗೆ ಎಷ್ಟು ಪೆನ್ಷನ್ ಬರುತ್ತಿತ್ತು ಎಂದು ಗೊತ್ತಿಲ್ಲ. ಪೆನ್ಷನ್ ಹಣವನ್ನು ಸಿದ್ದಮ್ಮ ತಾನೇ ಇಟ್ಟುಕೊಳ್ಳುತ್ತಿದ್ದರು. ಸಿದ್ದಮ್ಮನವರಿಗೆ ಪೆನ್ಷನ್ ಬರುತ್ತಿದ್ದುದರಿಂದ ಅವರಿಗೆ ಬೇರೆಯವರನ್ನು ಅವಲಂಬಿಸುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿ . ಸಿದ್ದಮ್ಮನವರ ಬ್ಯಾಂಕ್ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದು ಗೊತ್ತಿಲ್ಲ. ವಿಲ್ ನಾಮೆ ಬರೆದ ಬಗ್ಗೆ ಮತ್ತು ಅದರಲ್ಲಿಯ ಸಂಗತಿಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಿದ್ದಮ್ಮನ ಆಸ್ತಿಯನ್ನು ಎತ್ತಿ ಹಾಕಲು ನಾನು ನನ್ನ ಸ್ನೇಹಿತರಾದ ಜಗದೀಶ, ಅವರ ಸಹೋದರರಾದ ಭೀಮಪ್ಪ

ಇವರೊಂದಿಗೆ ಮಿಲಾಪಿಯಾಗಿ ವಿಲ್ ನಾಮೆಗೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ದಾಖಲೆ ಬರೆಯಲು ಸಿದ್ದಮ್ಮಮಾಹಿತಿ ಕೊಟ್ಟಿಲ್ಲ ಮತ್ತು ವಿಲ್ ನಾಮೆಯಲ್ಲಿ ಬರೆದ ಸಂಗತಿಗಳ ಬಗ್ಗೆ ಸಿದ್ದಮ್ಮನಿಗೆ ಮಾಹಿತಿಯೇ ಇರಲಿಲ್ಲ ಎಂದರೆ ಸರಿಯಲ್ಲ. 7 ನೆ ಎದುರುದಾರರು ಮತ್ತು ಆಕೆಯ ಗಂಡ ಸೇರಿಕೊಂಡು ವಿಲ್ ನಾಮೆಯನ್ನು ತಯ್ಯಾರಿಸಿ ಸಿದ್ದಮ್ಮನು ಅನಾರೋಗ್ಯವಾಗಿದ್ದಾಗ ಅಕೆಯ ಸಹಿಯನ್ನು ಪಡೆದಿರುತ್ತಾರೆಂದರೆ ಸರಿಯಲ್ಲ. ನನ್ನ ಸಮಕ್ಷಮ ಸಿದ್ದಮ್ಮ ವಿಲ್ ನಾಮೆಗೆ ಯಾವುದೇ ಸಹಿ ಹಾಕಿಲ್ಲ ಎಂದರೆ ಸರಿಯಲ್ಲ. ನನ್ನ ಸ್ನೇಹಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃಇಲ್ಲ.

*(*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ *29.02.2020* ರಂದು ಬೆರಳಚ್ಚು ಮಾಡಲಾಯಿತು*)*

***ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು-ಎಎಂಎಸಿಟಿ-11,***
***ಭದ್ರಾವತಿ.***